## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.4360/2015/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 21.3.2017

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೇವನಹಳ್ಳಿ ತಾಲ್ಲೂಕು ಅಗಲಕೋಟೆ ಗ್ರಾಮದ ಸರ್ವೆ ನಂ.6/ಪಿ1 ಕ್ಷೇತ್ರ 127 ಎಕರೆ 12 ಗುಂಟೆ ಸರ್ಕಾರಿ ಗೋಮಾಳ ಜಮೀನಾಗಿದ್ದು ಶ್ರೀನಿವಾಸ ತಂದೆ ಮುನೇಗೌಡ ಅವರು ಸದರಿ ಗೋಮಾಳ ಜಮೀನು ಅತಿಕ್ರಮಿಸಿ ಕಟ್ಟಡ ಕಟ್ಟಿರುವುದು ಕಂಡುಬಂದಿರುವುದರಿಂದ ಇದನ್ನು ಅಳತೆ ಮಾಡಿ ಒಂದುವೇಳೆ ಸಂಪೂರ್ಣ ಮನೆ ಗೋಮಾಳ ಜಮೀನಲ್ಲಿದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಂಡು ಹಾಗೂ ಬಸವ ವಸತಿ ಯೋಜನೆಯಡಿ ಮನೆ ಕಟ್ಟಲು ಹಣ ಮಂಜೂರಾಗಿದ್ದರೆ ಅದನ್ನು ಶ್ರೀನಿವಾಸ ತಂದೆ ಮುನೇಗೌಡ ಅವರಿಂದ ವಸೂಲುಮಾಡಿ ಸರ್ಕಾರಕ್ಕೆ ಭರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಲು ಕೋರಿ.

*******

ಶ್ರೀ ದೇವರಾಜು, ತಂದೆ ಪಾಪಣ್ಣ, ಅಗಲಕೋಟೆ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ.ಕೇಶವಮೂರ್ತಿ, ತಹಶೀಲ್ದಾರ್, ದೇವನಹಳ್ಳಿ ಹಾಗೂ (2) ಶ್ರೀ ಚಿದಾನಂದ, ಕಂದಾಯ ನಿರೀಕ್ಷಕರು, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಅಗಲಕೋಟೆ ಗ್ರಾಮದ ಸರ್ವೆ ನಂ.6/ಪಿ1 ಕ್ಷೇತ್ರ 127 ಎಕರೆ 12 ಗುಂಟೆ ಸರ್ಕಾರಿ ಗೋಮಾಳ ಜಮೀನಾಗಿದ್ದು, ಇದರಲ್ಲಿ ಶ್ರೀನಿವಾಸ ತಂದೆ ಮುನೇಗೌಡ ಅವರು ಅತಿಕ್ರಮಿಸಿ ಅಕ್ರಮವಾಗಿ ಕಟ್ಟಡ ಕಟ್ಟುತ್ತಿದ್ದಾರೆ. ಇದನ್ನು ತಡೆಗಟ್ಟಿ ಸೂಕ್ತ ಕ್ರಮ

ಕೈಗೊಳ್ಳುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹಾ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.19.12.2015ರಂದು ಗ್ರಾಮಲೆಕ್ಕಾಧಿಕಾರಿ,ರಾಜಸ್ವ ನಿರೀಕ್ಷಕರೊಂದಿಗೆ ಸ್ಥಳಪರಿಶೀಲಿಸಿದ್ದು, ಆಗ ಜಮೀನು ಅಳತೆ ಮಾಡದ ಹೊರತು ಇದನ್ನು ಅತಿಕ್ರಮಿಸಿ ಕಟ್ಟಡ ಕಟ್ಟಿದ್ದಾರೆಯೋ ಹೇಗೆ ಎಂದು ತೀರ್ಮಾನಕ್ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಆನಂತರ ಎಂ.ಎಲ್.ಸಿ.ಚುನಾವಣೆ, 94–ಸಿ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳ ವಿಲೇವಾರಿ, ಹೀಗೆ ಬಿಡುವಿಲ್ಲದ ಕೆಲಸ ಇರುವುದಿಂದ ಮಾರ್ಚ್ 2016ರವರೆಗೆ ಕಾಲಾವಕಾಶ ನೀಡಲು ಕೋರಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.30.10.2015ರಂದು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಸರ್ವೇ ನಂ.13/3 ವಿಸ್ತೀರ್ಣ 2.03 ಜಮೀನು ಶ್ರೀನಿವಾಸ ತಂದೆ ಮುನೇಗೌಡ ಅವರ ದಾಯಾದಿ ನಂಜುಂಡೇಗೌಡ ಅವರ ಹೆಸರಿನಲ್ಲಿ ಪಹಣಿಯಿದ್ದು, ಉತ್ತರಕ್ಕೆ 6/ಪಿ1ರ ಗೋಮಾಳದ ಜಮೀನು ಲಗತ್ತಾಗಿರುವುದು ಕಂಡುಬರುತ್ತದೆ. ಆದರೆ ಗಡಿ ಗುರುತು ಇರುವುದಿಲ್ಲ. ಸ್ಥಳದಲ್ಲಿ ಮನೆ ನಿರ್ಮಿಸುತ್ತಿರುವ ಶ್ರೀನಿವಾಸ್ ಅವರನ್ನು ವಿಚಾರಿಸಿದಾಗ ಚನ್ನಹಳ್ಳಿ ಪಂಚಾಯತಿಯಿಂದ ಅನುಬಂಧ 1 ಮತ್ತು 12ನ್ನು ಮನೆ ಕಟ್ಟಲು ನೀಡಿದ್ದು ಬಸವ ಯೋಜನೆಯಡಿ ರೂ.1,25,000/– ಅನುದಾನ ಮಂಜೂರಾಗಿರುತ್ತದೆ. ಈ ಮನೆ ಕಟ್ಟುವ ನಿವೇಶನವನ್ನು ಅಡಮಾನ ಸಹ ಮಾಡಿರುತ್ತಾರೆ. ಆನಂತರ ಈ ಜಾಗದ ಬಗ್ಗೆ ದೂರು ದಾಖಲಾಗಿರುವುದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲು ಆದೇಶಿಸಲಾಗಿರುತ್ತದೆ. 2.11.2015ರಂದು ಗಡಿ ಗುರ್ತಿಸಿಕೊಡಲು ತಾಲ್ಲೂಕು ಕಛೇರಿಗೆ ವರದಿಮಾಡಿದ್ದು, ಇದುವರೆಗೆ ಗಡಿ ಗುರ್ತಿಸಿರುವುದಿಲ್ಲ. ಗಡಿ ಗುರ್ತಿಸಿಕೊಟ್ಟಲ್ಲಿ ನಿಯಮಾನುಸಾರ ಸೂಕ್ತಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ 2ನೇ ಎದುರುದಾರರು ಹಾಗೂ ಶ್ರೀನಿವಾಸ್ ಅವರು ಸಂಬಂಧಿಗಳಾಗಿದ್ದು, ಈ ವಸತಿ ಯೋಜನೆಯ ಹಣ ಮಂಜೂರುಮಾಡದಂತೆ ತಕರಾರ ಅರ್ಜಿ ಸಲ್ಲಿಸಿದ್ದರೂ ಸಹಾ ಅವರ ಪ್ರಭಾವ ಬೀರಿ ಮನೆ ಪೂರ್ಣಗೊಳಿಸಿರುತ್ತಾರೆ. ಆದ್ದರಿಂದ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರಿದ್ದಾರೆ.

6. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, 1ನೇ ಎದುರುದಾರರು ಮಾರ್ಚ್ 2016ರೊಳಗೆ ಅಳತೆ ಮಾಡಿ ವಾಸ್ತವಾಂಶದ ವರದಿಯನ್ನು ಸಲ್ಲಿಸುವುದಾಗಿ ತಿಳಿಸಿದ್ದು, ಆದರೆ ಇದುವರೆಗೆ ವರದಿ ನೀಡಿರುವುದಿಲ್ಲ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆಂದು ತಿಳಿಸಿದ್ದು, ದೂರುದಾರರು ಹಾಜರುಪಡಿಸಿದ ಫೋಟೋ ಗಮನಿಸಲಾಗಿ ಈಗಾಗಲೇ ಕಟ್ಟಡ ಪೂರ್ಣಗೊಂಡಿರುತ್ತದೆ.

7. ಸರ್ವೆ ನಂ.6ಪಿ.1ರ ಪಹಣಿ ಪತ್ರಿಕೆ ಪರಿಶೀಲಿಸಿದಾಗ 127 ಎಕರೆ 12 ಗುಂಟೆ ಜಮೀನು ಗೋಮಾಳಕ್ಕೆ ಸೇರಿದ್ದಾಗಿ ನಮೂದಿಸಲಾಗಿರುತ್ತದೆ. ದೂರುದಾರರು ಎದುರುದಾರರಿಗೆ ಸಲ್ಲಿಸಿದ ಅರ್ಜಿಯಲ್ಲಿ ಅತಿಕ್ರಮಿಸಿ ಕಟ್ಟುತ್ತಿರುವ ಮನೆಗೆ ಸರ್ಕಾರದಿಂದ ಸಹಾಯಧನ ಬಿಡುಗಡೆ ಮಾಡದಂತೆ ಹಾಗೂ ಕಟ್ಟಡ ಸ್ಥಗಿತಗೊಳಿಸಲು ಅರ್ಜಿ ಸಲ್ಲಿಸದರೂ ಸಹಾ ಕಟ್ಟಡ ಪೂರ್ಣಗೊಂಡಿರುವುದರಿಂದ ಎದುರುದಾರರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿರುವುದಿಲ್ಲವೆಂದು ಕಂಡುಬರುತ್ತದೆ. ಈ ಕಾರಣದಿಂದ ಶ್ರೀನಿವಾಸ್ ಅವರು ಸರ್ಕಾರಿ ಗೋಮಾಳ ಜಮೀನು ಅತಿಕ್ರಮಿಸಿ ಕಟ್ಟಡ ಕಟ್ಟಲು ಅನುವು ಮಾಡಿಕೊಟ್ಟಂತಹ ಹಾಗೂ ಈ ಬಗ್ಗೆ ನಿಗಧಿತ ಅವಧಿಯೊಳಗೆ ಅಥವಾ ಆನಂತರವೂ ಸಹಾ ವರದಿ ಸಲ್ಲಿಸಲು ಎದುರುದಾರರು ವಿಫಲರಾಗಿದ್ದು, ಎದುರುದಾರರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷವಹಿಸಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೇವನಹಳ್ಳಿ ತಾಲ್ಲೂಕು ಅಗಲಕೋಟೆ ಗ್ರಾಮದ ಸರ್ವೆ ನಂ.6/ಪಿ1 ಕ್ಷೇತ್ರ 127 ಎಕರೆ 12 ಗುಂಟೆ ಸರ್ಕಾರಿ ಗೋಮಾಳ ಜಮೀನಾಗಿದ್ದು, ಶ್ರೀನಿವಾಸ ತಂದೆ ಮುನೇಗೌಡ ಅವರು ಸದರಿ ಗೋಮಾಳ ಜಮೀನು ಅತಿಕ್ರಮಿಸಿ ಕಟ್ಟಡ ಕಟ್ಟಿರುವುದು ಕಂಡುಬಂದಿರುವುದರಿಂದ ಇದನ್ನು ಅಳತೆ ಮಾಡಿ ಒಂದುವೇಳೆ ಸಂಪೂರ್ಣ ಮನೆ ಗೋಮಾಳ ಜಮೀನಲ್ಲಿದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಂಡು ಹಾಗೂ ಬಸವ ವಸತಿ ಯೋಜನೆಯಡಿ ಮನೆ ಕಟ್ಟಲು ಹಣ ಮಂಜೂರಾಗಿದ್ದರೆ ಅದನ್ನು ಶ್ರೀನಿವಾಸ ತಂದೆ ಮುನೇಗೌಡ ಅವರಿಂದ ವಸೂಲುಮಾಡಿ ಸರ್ಕಾರಕ್ಕೆ ಭರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕರ್ನಾಟಕ ಲೋಕಾಯುಕ್ತ ಕಾಯ್ದೆ-1984 ಕಲಂ 12(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರವನ್ನು ಕೋರಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 21/3/17.

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**